# ಸತಿ–ಸಹಗಮನ ಪದ್ಧತಿಯ ಉಗಮ ಮತ್ತು ಬೆಳವಣಿಗೆ

ವೈ. ಮದ್ದಾನಸ್ವಾಮಿ[1] & ನಾಗರಾಜ ತಳವಾರ[2]

[1]ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

[2]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

DOI: https://doi.org/10.5281/zenodo.22544757

**ABSTRACT:**

ದೇವರ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಧಾರ್ಮಿಕ ಬಲಿದಾನ ಕಾಲಾಂತರದಲ್ಲಿ ಪ್ರಿಯವ್ಯಕ್ತಿಯ ಹೆಸರಿನಲ್ಲಿ ಪ್ರಾಣೋತ್ಕ್ರಮಣ ಮಾಡಿಕೊಳ್ಳುವ ಲೌಕಿಕ ಬಲಿದಾನಕ್ಕೆ ದಾರಿಮಾಡಿಕೊಟ್ಟಂತೆ ತೋರುತ್ತದೆ. ಈ ಲೌಕಿಕ ಬಲಿದಾದಲ್ಲಿ ಪತಿಗಾಗಿ ಪ್ರಿಯಸತಿಯ ಪ್ರಾಣೋತ್ಕ್ರಮಣ ಮತ್ತು ಒಡೆಯನಿಗಾಗಿ ಪ್ರಿಯವ್ಯಕ್ತಿಯ (ಸೇವಕನ) ಪ್ರಾಣೋತ್ಕ್ರಮಣ ಎಂದು ಎರಡು ವಿಧಗಳಿದ್ದು, ಅವುಗಳಿಗೆ ಕ್ರಮವಾಗಿ ಸಹಗಮನ (ಮಹಾಸತಿ), ವೇಳವಾಳಿ (ಲೆಂಕವಾಳಿ) ಎಂದು ಹೆಸರು. ಧಾರ್ಮಿಕ ಬಲಿದಾನ ಪುರೋಹಿತ ವರ್ಗ ಯೋಚಿಸಿದ ಶೋಷಣೆಯಾದರೆ, ವೇಳವಾಳಿಯು ಪ್ರಭುವರ್ಗ ಯೋಚಿಸಿದ ಶೋಷಣೆ. ಹಾಗೆಯೇ ಇಲ್ಲಿ ಹೇಳಿದ ಸಹಗಮನವು ಪುರುಷವರ್ಗ ಯೋಚಿಸಿದ ಶೋಷಣೆ ಎಂದು ಹೇಳಬಹುದು. ಸತ್ತ ವ್ಯಕ್ತಿಯೊಂದಿಗೆ ಅವನ ಪ್ರಿಯವಸ್ತುಗಳನ್ನು ಹೂಳಬೇಕು. ಇಲ್ಲವೆ ಸುಡಬೇಕು ಎಂಬ ಭಾವನೆ ಈ ಸಂಪ್ರದಾಯಕ್ಕೆ ದಾರಿಮಾಡಿಕೊಟ್ಟಿರಬಹುದು. ಕರ್ನಾಟಕದಲ್ಲಿ ಈ ಪರಂಪರೆಯನ್ನು ಅರಿಯಲು ನಮಗೆ ಶಾಸನಸಾಹಿತ್ಯ, ಗ್ರಂಥಸಾಹಿತ್ಯ, ದಿನಚರಿ ಸಾಹಿತ್ಯ, ಜನಪದ ಸಾಹಿತ್ಯ, ಶಿಲಾಸಾಮಗ್ರಿಗಳು, ಅವಶೇಷಗಳು ಮತ್ತು ವದಂತಿಗಳು ನೆರವಾಗುತ್ತವೆ. ಇವುಗಳಲ್ಲಿ ಸತಿಘಟನೆಯನ್ನು ತಿಳಿದುಕೊಳ್ಳಲು ತುಂಬ ವಿಶ್ವಾಸನೀಯ ಆಧಾರಗಳೆಂದರೆ ಮಹಾಸತಿ ಕಲ್ಲುಗಳು.

‘ಸತಿ’ ಶಬ್ದ ಪರಿಮಿತ ಅರ್ಥದಲ್ಲಿ ಗಂಡನ ಮರಣದ ನಂತರ ಪತ್ನಿಯು ಸ್ವ–ಇಚ್ಛೆಯಿಂದ ಮರಣ ಹೊಂದುವುದನ್ನು ಸೂಚಿಸುತ್ತದೆ. ಅತ್ಯಂತ ಕ್ರೂರವೆನಿಸುವುದರ ಜೊತೆಗೆ ಸೋಜಿಗವೂ, ಪೂಜ್ಯನೀಯವೂ, ವೈಭವಪೂರ್ಣವೂ ಎನಿಸಿರುವ ಇದು ಒಂದು ಪದ್ಧತಿಯಾಗಿ ರೂಪುಗೊಂಡು ಇತಿಹಾಸದ ಬಹುಮುಖ್ಯ ಭಾಗವಾಗಿ ಪರಿಣಮಿಸಿದೆ. ಶಾಸನಗಳಲ್ಲಿ ಸಾಮಾನ್ಯವಾಗಿ ಈ ಪದ್ಧತಿಯನ್ನು ತಿಳಿಸುವ ಅಂಶಗಳಿದ್ದರೆ ಅವುಗಳನ್ನು ‘ಮಾಸ್ತಿಕಲ್ಲು’ಗಳು ಎಂದು ಕರೆಯಲಾಗಿದೆ. ಕೆಲವು ಶಾಸನಗಳು ಮಾಸ್ತಿಕಲ್ಲನ್ನು ‘ಮದವಳಿಗೆ ಕಲ್ಲು’,

‘ಶಿಲಾಶಾಸನ’, ‘ಮಾಸ್ತಿಕಳು’, ‘ಶಿಲಾಸ್ತಂಭಶಾಸನ’, ‘ಕಂಬ’ ಎಂದು ಉಲ್ಲೇಖಿಸಿವೆ.

‘ಮಾಸ್ತಿ’ ಎಂಬುದು ಸಂಸ್ಕೃತದ ‘ಮಹಾಸತಿ’ ಎಂಬುದರ ಸಂಕ್ಷಿಪ್ತ ರೂಪ. ಗಂಡ ಸತ್ತ ಮೇಲೆ ಅವನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀಯನ್ನು ಮಹಾಸತಿ ಅಥವಾ ಮಾಸ್ತಿ ಎಂದು ಕರೆಯುತ್ತಿದ್ದರು. ದೇವರಿಗಾಗಿ ಕೈಕೊಳ್ಳುವ ಆತ್ಮಬಲಿದಾನ, ಪ್ರಿಯವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಪತಿಯ ಸಲುವಾಗಿ ಸತಿ ಕೈಕೊಂಡರೆ ‘ಸಹಗಮನ ಮರಣ’. ಪತಿಯ ಯಾವುದೇ ರೀತಿಯ ಮರಣಾನಂತರ ಮಡದಿ ಪ್ರಮುಖವಾಗಿ ಅಗ್ನಿಪ್ರವೇಶದ ಮೂಲಕ, ಗೌಣವಾಗಿ ಇತರ ವಿಧಾನಗಳ ಮೂಲಕ ತನ್ನ ಪ್ರಾಣವನ್ನು ಬಲಿ ಕೊಡುತ್ತಿದ್ದಳು. ಹೀಗೆ ಪ್ರಾಣವನ್ನು ಅರ್ಪಿಸುವವಳೇ ಮಹಾಸತಿ. ಮಾಸ್ತಿ ಎಂಬುದು ಇದರ ತದ್ಭವ ರೂಪ. ಪ್ರಾಚೀನ ಕಾಲದಲ್ಲಿ ಗಂಡ ಸತ್ತ ನಂತರ ಅನೇಕ ಸ್ತ್ರೀಯರು ಪತಿಯ ಚಿತೆಯಲ್ಲಿ ಹಾರಿ ಅಥವಾ ಆತನ ಸಮಾಧಿಯಲ್ಲಿ ತಮ್ಮನ್ನು ಜೀವಂತವಾಗಿ ಹುಗಿಸಿಕೊಳ್ಳುವ ಮೂಲಕ ಪ್ರಾಣಾರ್ಪಣೆ ಗೈಯುವುದನ್ನು ಒಂದು ‘ಮೌಲ್ಯ’ ಎಂದು ಭಾವಿಸಿದ್ದರು. ಇಂಥ ಮೌಲ್ಯ ಮೆರೆದ ಸ್ತ್ರೀಯರನ್ನು ಮಹಾಸತಿಯರೆಂದು ಕರೆದು, ಅವರ ಸ್ಮರಣಾರ್ಥವಾಗಿ ಸ್ಥಾಪಿಸಿದ ಸ್ಮಾರಕಗಳನ್ನು ‘ಮಾಸ್ತಿಕಲ್ಲು’ ಎಂದು ಕರೆಯುತ್ತಾರೆ.

ನಮ್ಮ ಪುರಾಣಗಳಲ್ಲಿ, ದಂತಕಥೆಗಳಲ್ಲಿ ಅತಿಯಾಗಿ ವೈಭವೀಕರಿಸಲಾಗಿರುವ ಪಾತಿವ್ರತ್ಯದ ವೈಭವೀಕರಣದ ಪರ್ಯಾಯ ರಕ್ಷಣೆಯೇ ಈ ಸತಿಪದ್ಧತಿ, ಸತಿ–ಪತಿಯರ ಸಂಬಂಧವನ್ನು ಭಾವನಾತ್ಮಕವಾಗಿ ಹೆಣೆದು ಪ್ರತ್ಯಕ್ಷವಾಗಿ ಅವರಿಬ್ಬರಲ್ಲಿ ಯಾವುದೇ ಅಂತರವಿಲ್ಲವೆಂಬುದನ್ನು ಸಾಕ್ಷೀಕರಿಸಲು ತಂದಂತಹ ಮಾರ್ಗವನ್ನು ಸತಿಪದ್ಧತಿ ಎಂದು ಕರೆದಿದ್ದಾರೆ. ಇದನ್ನು ನಿರಂತರವಾಗಿ ಗಂಡನ ಸೇವೆ ಮಾಡುವ ಇನ್ನೊಂದು ಮಾರ್ಗ ಎಂದಿದ್ದಾರೆ. ಮಧ್ಯಯುಗದಲ್ಲಿ ಉಂಟಾದ ರಾಜಕೀಯ ವೈರುಧ್ಯಗಳು ಮತ್ತು ಸಾಮಾಜಿಕ ಕಟ್ಟುಪಾಡುಗಳಲ್ಲಿ ಆದ ಬದಲಾವಣೆಗಳಿಂದಾಗಿ ಈ ಪದ್ಧತಿ ತನ್ನ ಅರ್ಥ ಮತ್ತು ಹೊಸ ಜೀವಂತಿಕೆಯನ್ನು ಪಡೆದುಕೊಂಡಿತು. ಮುಸ್ಲಿಂ ಆಕ್ರಮಣಕಾರರಿಂದ ಹಿಂದೂ ಸ್ತ್ರೀಯರು ತಮ್ಮ ಶೀಲವನ್ನು ಕಾಪಾಡಿಕೊಳ್ಳಲು ತಮಗೆ ತಾವೇ ರೂಪಿಸಿಕೊಂಡ ಒಂದು ಪದ್ಧತಿ ಅಥವಾ ಮುಸ್ಲಿಂ ಆಕ್ರಮಣಕಾರರಿಗೆ ಸೋತು ಶರಣಾಗಿ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗುವ ಮುಂಚೆಯೇ ಪತಿವ್ರತೆಯರಾಗಿ ಸಾಯುವುದು ಮೇಲೆಂದು ದೊಡ್ಡ ಚಿತೆಯನ್ನು ನಿರ್ಮಿಸಿ ಸಾಮೂಹಿಕವಾಗಿ ಚಿತೆಯೇರುವ ಮೂಲಕ ತಮ್ಮನ್ನು ತಾವು ಬಲಿದಾನ ಮಾಡಿಕೊಳ್ಳುವ ಪದ್ಧತಿಯೇ ಈ ಸತಿಪದ್ಧತಿಯಾಗಿದೆ. ಇದಕ್ಕೆ ಇನ್ನೊಂದು ಮಾದರಿ ಎಂದರೆ ‘ಜೋಹಾರ್,’ ಇದು ಕೂಡಾ ಅಂದು ಉತ್ತರ ಭಾರತದಲ್ಲಿ ಜಾರಿಯಲ್ಲಿತ್ತು ಎಂದು ಹೇಳಲಾಗುತ್ತದೆ.

ಶಾಸನಗಳಲ್ಲಿ ಈ ಬಗೆಯ ಬಲಿದಾನಕ್ಕೆ ಸತಿ, ಮಹಾಸತಿ, ಮಾಸ್ತಿ,

ಸಹಗಮನ, ಅನುಗಮನ, ಸಹಮರಣ, ಅನುಮರಣ, ತೋಳುಗೆಯ್ ಕೊಡು, ಪುರುಷವ್ರತ, ಸಹಾನುಭೂತಿ ಹೊಂದು, ಸಹಸಂಗತಿ ಬಿಡು, ಅಗ್ನಿಪ್ರವೇಶ ಮಾಡು ಮತ್ತು ಮದುವಳಿಗೆ ಕಲ್ಲು ಎಂಬ ಪದಗಳನ್ನು ಬಳಸಲಾಗಿದೆ. ಶಾಸನವೊಂದು ಇದನ್ನು ಮಾಸ್ತಿಕಲ್ಲು ಎಂಬುದಕ್ಕೆ ಬದಲಾಗಿ ವೀರಗಲ್ಲು ಎಂದು ಕರೆದಿದೆ. ಅಲ್ಲದೆ 'ವೀರಮಾಸ್ತಿ' ಎಂದು ಉಲ್ಲೇಖಿಸುವ ಒಂದು ಶಾಸನವನ್ನೂ ಕಾಣಬಹುದು. ಶಾಸನಗಳಲ್ಲಿ ಕಂಡುಬರುವ 'ಕೈಕೊಟ್ಟಳ್' ಮತ್ತು 'ತೋಳು ಕೈಕೊಟ್ಟಳ್' ಎಂಬ ಉಲ್ಲೇಖಗಳು ಮಾಸ್ತಿ ಆಚರಣೆಯ ಹಿಂದಿರುವ ಮನೋಭಾವವನ್ನು ಸೂಕ್ಷ್ಮವಾಗಿ ತಿಳಿಸುವಂತಿವೆ. ಇವುಗಳಲ್ಲದೆ ಮಸತಿ, ಸತಿಗಮನವಂ ಮಾಡಿದ, ತೋಳು ಕಯೆಗೊಟ್ಟು ಎಂಬ ಶಬ್ದಗಳೂ ಸಹ ಕ್ವಚಿತ್ತಾಗಿ ಶಾಸನಗಳಲ್ಲಿ ಬಳಕೆಯಾಗಿದ್ದು, ಅವುಗಳೆಲ್ಲ ಪತಿಯ ಮರಣಾನಂತರ ಪತ್ನಿಯು ಪ್ರಾಣತ್ಯಾಗ ಮಾಡಿದ್ದನ್ನು ಬೇರೆಬೇರೆ ಶಬ್ದಗಳಿಂದ ಹೇಳುತ್ತವೆ.

**KEYWORDS:**

ಸತಿಸಹಗಮನ, ಪ್ರಾಣೋತ್ಕ್ರಮಣ, ವೇಳವಾಳಿ, ಮಾಸ್ತಿಕಲ್ಲು, ಶಿಲಾಸ್ತಂಭಶಾಸನ, ಜೋಹಾರ್, ತೋಳು ಕೈಕೊಟ್ಟಳ್, ಮೆಸೊಲಿಥಿಕ್, ಉದೀಶ್ವನಾರಿ.

ಮಾನವಿಕ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದುಬಂದಿರುವ ಅನೇಕ ವಿಶಿಷ್ಟ ಆಚರಣೆಗಳಲ್ಲಿ ಈ ಸತಿ ಪದ್ಧತಿಯೂ ಒಂದು. ಭಾರತವನ್ನೊಳಗೊಂಡಂತೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಪ್ರಚಲಿತದಲ್ಲಿದ್ದ ಸತಿ ಪದ್ಧತಿಯು ಎಲ್ಲಿ? ಹೇಗೆ? ಏಕೆ? ಹುಟ್ಟಿತು ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅದು ಸಾಗಿ ಬಂದ ದಾರಿಯನ್ನು ಲಭ್ಯವಿರುವ ಐತಿಹಾಸಿಕ ದಾಖಲೆಗಳಿಂದ, ಕೈಗೊಳ್ಳಲಾದ ಸಂಶೋಧನೆಗಳಿಂದ ಮತ್ತು ಇತಿಹಾಸಕಾರರು ನೀಡಿದ ವಿವಿಧ ಅಭಿಪ್ರಾಯಗಳಿಂದ ವಿಶ್ಲೇಷಿಸಬಹುದು. ವಿಶ್ವದ ಬೇರೆ ಬೇರೆ ದೇಶಗಳಲ್ಲಿ ತನ್ನದೇ ಆದ ಶೈಲಿಯಲ್ಲಿ ರೂಢಿಯಲ್ಲಿದ್ದ ಈ ಪದ್ಧತಿಯ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಜನಾಂಗಗಳ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳನ್ನು ಬೇರ ಬೇರೆ ನೆಲೆಗಟ್ಟಿನಲ್ಲಿ ಗುರುತಿಸುವುದು ಇದಕ್ಕೆ ಕಾರಣವಿರಬಹುದು.

ಪ್ರಾಚೀನ ಜನಾಂಗಗಳಲ್ಲಿ ಸತ್ತವರು ಪರಲೋಕದಲ್ಲೂ ಈ ಲೋಕದ ಅವಶ್ಯಕತೆಗಳನ್ನು ಹೊಂದಿರುತ್ತಾರೆ ಎಂಬ ಧಾರ್ಮಿಕ ನಂಬಿಕೆ ಪ್ರಚಲಿತವಿತ್ತು. ಆದ್ದರಿಂದ ಅವನ ಬಂಧುವರ್ಗದವರು ಅವನು ಬದುಕಿದ್ದಾಗ ಉಪಯೋಗಿಸುತ್ತಿದ್ದ ವಸ್ತುಗಳನ್ನು ಪರಲೋಕದಲ್ಲೂ ಪೂರೈಕೆ ಮಾಡುವ ಕರ್ತವ್ಯಕ್ಕೆ ಬದ್ಧರಾಗಿದ್ದರು. ಅದರಲ್ಲೂ ರಾಜನಾದವನು ಸತ್ತಾಗ, ಅವನೊಂದಿಗೆ ಕುದುರೆಗಳು, ಸೇವಕರು,

ಪತ್ನಿಯರು ಮತ್ತು ಅವನು ಉಪಯೋಗಿಸುತ್ತಿದ್ದ ವಸ್ತುಗಳನ್ನು ಸುಡುವ ಅಥವಾ ಹೂಳಿಡುವ ಸಂಪ್ರದಾಯ ಚಾಲನೆಯಲ್ಲಿತ್ತು. ಸತ್ತ ವ್ಯಕ್ತಿಯೊಂದಿಗೆ ಅವನ ಪ್ರಿಯವಸ್ತುಗಳನ್ನು ಹೂಳಬೇಕೆಂಬ ಇಲ್ಲವೆ ಸುಡಬೇಕೆಂಬ ಭಾವನೆ ಈ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿರಬಹುದು. ಅನೇಕ ವರ್ಷಗಳಿಂದ ಮಾನವಸಮಾಜದೊಂದಿಗೆ ಬೆರೆತುಬಂದ ಈ ಪದ್ಧತಿ ಒಮ್ಮಿಂದೊಮ್ಮೆಲೆ ವಿಶ್ವದ ಬೇರೆ ಬೇರೆ ರಾಷ್ಟ್ರಗಳಲ್ಲಿ ಹುಟ್ಟಿ, ಏಕಕಾಲದಲ್ಲಿ ಪ್ರಸಾರಗೊಂಡಿದ್ದಲ್ಲ. ಸ್ವರ್ಗ-ನರಕಗಳ ಪರಿಕಲ್ಪನೆ, ಪುನರ್ಜನ್ಮದಲ್ಲಿಯ ನಂಬಿಕೆ, ಪತಿಪತ್ನಿಯರ ಭಾವನಾತ್ಮಕ ಸಂಬಂಧ, ಧಾರ್ಮಿಕ ನಂಬಿಕೆಗಳು, ಸಾಮಾಜಿಕವಾಗಿ ವಿಧವೆಯ ಸ್ಥಾನಮಾನ, ಗೌರವದ ಪ್ರಶ್ನೆ ಮತ್ತು ಪಾತಿವ್ರತ್ಯ ಪರಿಪಾಲನೆ ಮುಂತಾದ ಕಾರಣಗಳಿಂದಾಗಿ ನಿಧಾನವಾಗಿ ಸ್ವ-ಇಚ್ಛೆಯಿಂದ ಅನಿರೀಕ್ಷಿತವಾಗಿ ಪ್ರಾರಂಭವಾದ ಇದು ಕಾಲಾಂತರದಲ್ಲಿ ಒಂದು ಸಂಪ್ರದಾಯವಾಗಿ ಬೆಳವಣಿಗೆಗೊಂಡಿರುವುದು ಈ ಪರಂಪರೆಗೆ ಮೂಲವೆಂದು ತೋರುತ್ತದೆ. ಈ ನೆಲೆಗಟ್ಟಿನಲ್ಲಿ ಯೋಚಿಸಿದ ಅನೇಕ ವಿಸ್ವಾಂಸರು ಸತಿ ಪದ್ಧತಿಯ ಮೂಲವನ್ನು ಮತ್ತು ಪ್ರಾಚೀನತೆಯನ್ನು ಗುರುತಿಸಲು ಪ್ರಯತ್ನಿಸುತ್ತಿದ್ದಾರೆ. ಸುಮೇರಿಯನ್ನರ 'ಉರ' ನಗರದಲ್ಲಿ ಕೈಗೊಂಡ ಭೂಶೋಧನೆಯಲ್ಲಿ ಕ್ರಿ.ಶ.ಪೂ. 4000 ವರ್ಷಗಳ ಹಿಂದಿನ ಸಮಾಧಿಗಳು ಸಿಕ್ಕಿದ್ದು, ಅವು ಸತಿ ಪದ್ಧತಿಯ ಕುರುಹುಗಳನ್ನು ಹೊಂದಿವೆ. ಇಲ್ಲಿ ರಾಜನ ಸಮಾಧಿಯ ಸಮೀಪದಲ್ಲಿ 59 ಕ್ಕೂ ಹೆಚ್ಚು ಮೃತದೇಹಗಳ ಅವಶೇಷಗಳಿದ್ದು, ಅವುಗಳಲ್ಲಿ ಆರು ಜನ ಸೈನಿಕರು, ಒಂಬತ್ತು ಜನ ಆಭರಣಗಳಿಂದ ಅಲಂಕೃತಗೊಂಡ ರಾಣಿಯರ ಶವಗಳಾಗಿರುವುದು ಮುಖ್ಯ. ಅರಿಗ್ನೇಸಿಯನ್ ಆಳ್ವಿಕೆಯ ಕಾಲದ ಕ್ರಿ.ಪೂ.ಸು. 3100ನೆಯದೆಂದು ಹೇಳಲಾದ ಈಜಿಪ್ಟಿನ ಅರಸು ಮನೆತನದ ಚಕ್ರವರ್ತಿ ಉವಾಜಿಯ ಗೋರಿಯಲ್ಲಿ ಯುವಕರ ಅಸ್ಥಿಪಂಜರದ ಜೊತೆಗೆ ಯುವತಿಯರ ಅಸ್ಥಿಪಂಜರಗಳೂ ಕಂಡುಬಂದಿದ್ದು, ಸ್ತ್ರೀ-ಪುರುಷರನ್ನು ಜೊತೆಯಲ್ಲಿ ಹೂಳಲಾಗುತ್ತಿತ್ತು ಎಂಬುದರ ಜೊತೆಗೆ ಸತಿ ಆಚರಣೆಯ ಕುರುಹನ್ನು ಕಾಣಬಹುದು. ಕ್ರಿ.ಶ.ಪೂ. 3000ದ ಕಾಲಕ್ಕೆ ಸೇರಿದ ಪ್ರಾಚೀನ ಚೆಪ್ಸೊ (cheops) ಪಿರಮಿಡೊಂದು ರಾಣಿಯರಿಗಾಗಿ ಬೇರೆ ಕೋಣೆಯನ್ನು ಹೊಂದಿದೆ. ಈಜಿಪ್ತಿನ 'ಝುರ್'ನ ಸಮಾಧಿಗೆ ಹೊಂದಿದಂತೆ ಇರುವ ಸಮಾಧಿಯಲ್ಲಿ 275 ರಾಣಿಯರೂ, 43 ಜನ ರಾಜಮನೆತನದವರೂ ಹಾಗೂ ಒಂದು ಮೈಲು ಅಂತರದಲ್ಲಿ 269 ಜನರೂ ಹುಗಿಯಲ್ಪಟ್ಟಿದ್ದಾರೆ. ಇವುಗಳೆಲ್ಲ ಸತಿ ಆಚರಣೆಯ ಪ್ರಾಚೀನ ಕುರುಹುಗಳಾಗಿವೆ.

ಗ್ರೀಕ್ ಅರಸರ ಆಳ್ವಿಕೆಯಲ್ಲೂ ಸತಿ ಘಟನೆಗಳು ನಡೆದಿರಬಹುದು ಎನ್ನುವುದಕ್ಕೆ ಅಲ್ಲಿಯ ಪ್ರಾಚೀನ ಐತಿಹ್ಯವೊಂದು ಎವಡ್ನೆ (Evodne) ಎನ್ನುವ ರಾಣಿ ತನ್ನ ಗಂಡನ ಚಿತೆಯಲ್ಲಿ ಹಾರಿ ಪ್ರಾಣಬಿಡುವ ಸನ್ನಿವೇಶವೇ ಸಾಕ್ಷಿಯಾಗಿದೆ. ಕ್ರಿ.ಶ.ಪೂ. ಮೊದಲನೆಯ ಶತಮಾನದಲ್ಲಿ ಈ ಪದ್ಧತಿ ಗೋಲ್ಸ್ ರಲ್ಲಿ ಇದ್ದುದನ್ನು ಜೂಲಿಯಸ್ ಸೀಜರ್ ಗುರುತಿಸಿದ್ದಾನೆ. ಚೀನಾದಲ್ಲಿ ವಿಧವೆಯಾದವಳು ತನ್ನ ಸತ್ತ

ಗಂಡನ ಹಿಂದೆ ಸ್ವರ್ಗಕ್ಕೆ ಹೋಗಲು ತನ್ನನ್ನು ತಾನೇ ಕೊಂದುಕೊಂಡರೆ ಅವಳ ಶವವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತಂತೆ. ಜೊತೆಯಲ್ಲಿ ವಿಧವೆಯಾದವಳು. ತನ್ನ ಪಾತಿವ್ರತ್ಯ ಕಾಪಾಡಿಕೊಂಡು ಬಂದರೆ ಅವಳ ಗೌರವಾರ್ಥ ಕಮಾನನ್ನು ಮಾಡಿಸಿ ದೇವಾಲಯದಲ್ಲಿ ಪೂಜಿಸಲಾಗುತ್ತಿತ್ತು. ಇಂಡೋ–ಯುರೋಪಿಯನ್ ಜನಾಂಗಗಳಾದ ಗೋಲರು, ನಾರ್ವೇಜಿಯನ್ನರು, ಗೋಥರು, ಕೆಲ್ಟರು, ಸ್ಲಾವ್ಹರು ಮತ್ತು ಥ್ರೇಷಿಯನ್ನರಲ್ಲಿ ಈ ಪದ್ಧತಿಯು ಆಚರಣೆಯಲ್ಲಿದ್ದುದರಿಂದ ಸತಿ ಆಚರಣೆ ಇಂಡೋ–ಯುರೋಪಿಯನ್ನರಲ್ಲಿ ಇತ್ತೆಂದು ಎ. ಎಸ್. ಅಲ್ತೇಕರ್‌ರು ಅಭಿಪ್ರಾಯ ಪಡುತ್ತಾರೆ. ಸ್ಲಾವೋನಿಕ್ ಪ್ರದೇಶದ ವಿಧವೆಯರು ಸತ್ತ ಗಂಡನೊಡನೆ ಮರಣ ಹೊಂದಲು ಇಷ್ಟಪಡುವುದನ್ನು ರಾಲ್ಸನ್‌ರವರು ಗುರುತಿಸುತ್ತಾರೆ. ಸತ್ತ ಗಂಡನೊಡನೆ ವಿಧವೆಯನ್ನು ದಹನ ಮಾಡುವ ಆಚರಣೆ ಇಂಡೋ–ಜರ್ಮನ್ನರಲ್ಲಿತ್ತೆಂದು ಪೆಂಜೇರ್ ಹೇಳುತ್ತಾನೆ. ಥಾಮ್ಸನ್ ಎಂಬುವವನು ಟೊಂಗಾ, ಫಿಜಿಯನ್, ಮೌರಿಸ್ ಮುಂತಾದ ಆಫ್ರಿಕಾದ ಗುಂಪುಗಳಲ್ಲಿ ಮತ್ತು ಅಮೇರಿಕಾದ ಇಂಡಿಯನ್ ಬಣಗಳಲ್ಲಿ ಸಹಗಮನದ ಕುರುಹುಗಳಿರುವುದನ್ನು ಗುರುತಿಸಿದ್ದಾನೆ. ರಾವಿ ನದಿಯ ದಡದಲ್ಲಿದ್ದ ಕಥೈಓ (Kathaio) ಜನಾಂಗದವರಲ್ಲಿಯೂ ಸತಿಯ ಆಚರಣೆ ಇತ್ತೆಂದು ತಿಳಿಯುತ್ತದೆ. ವೋಲ್ಗಾದ ಬಲ್ಗೇರಿಯನ್ ಜನಾಂಗದ ರಾಜನ ಹೆಂಡತಿಯೊಬ್ಬಳು ಸಹಗಮನ ಮಾಡಿದ್ದನ್ನು Iban Fadhlan ಎಂಬ ಅರಬ್ ಯಾತ್ರಿಕ ತಿಳಿಸುತ್ತಾನೆ. ಮೇಲಿನ ಅಭಿಪ್ರಾಯಗಳನ್ನು ಅವಲೋಕಿಸಲಾಗಿ ಸತಿ ಪದ್ಧತಿಯು ಪ್ರಪಂಚದ ಪ್ರಾಚೀನ ಸಂಸ್ಕೃತಿಗಳಾದ ಸಿಂಧ್, ಸುಮೇರಿಯನ್, ಈಜಿಪ್ಟ್ ಮುಂತಾದವುಗಳಲ್ಲಿ ಅಸ್ತಿತ್ವದಲ್ಲಿತ್ತು ಎಂಬುದು ಮನದಟ್ಟಾಗುತ್ತದೆ. ಈ ಪದ್ಧತಿಯು ಬೇರೆ ಬೇರೆ ದೇಶಗಳಲ್ಲಿ ಒಮ್ಮೆಲೆ ಅಸ್ತಿತ್ವಕ್ಕೆ ಬಂದಿದ್ದಲ್ಲ ಎಂಬುದು ತಿಳಿಯುತ್ತದೆ. ಅಲ್ಲದೆ ಇದು ಒಂದು ನಿರ್ದಿಷ್ಟ ಕಾಲಕ್ಕೆ ಸೀಮಿತವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಭಾರತದಲ್ಲಿ ಸತಿಪದ್ಧತಿಯ ಉಗಮ ಮತ್ತು ಪ್ರಾಚೀನತೆಯ ಬಗ್ಗೆ ವಿದ್ವಾಂಸರು ತಮ್ಮದೇ ಆದ ವಾದಗಳನ್ನು ಮುಂದಿಡುತ್ತಾರೆ. ಅವುಗಳೆಂದರೆ ಇದು ಮೂಲತಃ ಭಾರತದಲ್ಲಿ ಇರಲಿಲ್ಲ, ಪರದೇಶದಿಂದ ಭಾರತಕ್ಕೆ ಬಂದಿತೆಂಬುದು ಒಂದು ವಾದವಾದರೆ. ಇನ್ನೊಂದು ವಾದದ ಪ್ರಕಾರ ಸತಿ ಆಚರಣೆ ಮೂಲತಃ ಭಾರತದ್ದೇ ಎಂಬುದು. ವಿ. ಎ. ಸ್ಮಿತ್ ಅವರು ಸತಿಪದ್ಧತಿ ಮೂಲತಃ ಸಿಥಿಯನ್ನರದ್ದಾಗಿದ್ದು, ಮಧ್ಯ ಏಷ್ಯಾದಿಂದ ಬಂದಿರಬಹುದಾದ ಆಚರಣೆ ಎಂದು ಅಭಿಪ್ರಾಯಪಡುತ್ತಾರೆ. ಕ್ರಿಸ್ತಶಕದ ಪ್ರಾರಂಭದಲ್ಲಿ ಸಿಥಿಯನ್ ರಾಜರು ಸತಿಪದ್ಧತಿಯನ್ನು ಅನುಸರಿಸುತ್ತಿದ್ದರು. ಅಲೆಕ್ಸಾಂಡರ್ ಮತ್ತಿತರರ ಪ್ರಭಾವದಿಂದ ಇದು ಭಾರತದ ಪಂಜಾಬ್, ತಕ್ಷಶಿಲೆ ಹಾಗೂ ರಾವಿನದಿ ದಂಡೆಯ ಕಥೈ ಜನರಲ್ಲಿ ಆಚರಣೆಗೆ ಬಂದಿತೆಂದು ಸಮರ್ಥಿಸುತ್ತಾರೆ. ಭಾರತ ಮತ್ತು ಸಿಥಿಯನ್ನರ ಸತಿ ಆಚರಣೆಯ ಲಕ್ಷಣಗಳು ಒಂದೇ ರೀತಿಯಲ್ಲಿರುದರಿಂದ ಇದು ಸಿಥಿಯನ್ನರಿಂದ ಭಾರತಕ್ಕೆ ಬಂದದ್ದೆಂಬ ವಾದವನ್ನು

ಮುಂದಿಡುತ್ತಾ, ಸಿಥಿಯನ್ ಮತ್ತು ಥ್ರೇಷಿಯನ್‌ರ ಸತಿಪದ್ಧತಿಯಲ್ಲಿ ಸಾಮ್ಯವಿದೆ ಎಂದು ಹೇಳುತ್ತಾರೆ. ಎ. ಎಲ್. ಭಾಷ್ಯಂ ಅವರು ಈ ಪದ್ಧತಿ ಮಧ್ಯ ಏಷ್ಯಾದ ಅಲೆಮಾರಿಗಳಲ್ಲಿ ಆಚರಿಸಲ್ಪಡುತ್ತಿತ್ತು, ಭಾರತದ ಮೇಲೆ ಅವರ ಆಕ್ರಮಣಗಳಿಂದ ಇಲ್ಲಿ ಪ್ರಚಾರಕ್ಕೆ ಬಂದಿತು ಎಂದು ಹೇಳುತ್ತಾರೆ. ಎಡ್ವರ್ಡ್ ಥಾಮ್ಸನ್ ಅವರು ಸತಿ ಪದ್ಧತಿಯ ಉಗಮವನ್ನು ಭಾರತದ ಬುಡಕಟ್ಟು ಜನಾಂಗಗಳಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಸತಿ ಆಚರಣೆ ಮೊದಲು ಭಾರತದ ಪ್ರಾಚೀನ ಬುಡಕಟ್ಟುಗಳಲ್ಲಿ ಪ್ರಚಲಿತದಲ್ಲಿತ್ತು. ಈ ಬುಡಕಟ್ಟು ಬಣಗಳು ಹಿಂದೂ ಧರ್ಮದಲ್ಲಿ ಕೂಡಿಕೊಂಡಾಗ ಅವರಲ್ಲಿಯೂ ಆಚರಣೆಗೆ ಬಂದಿತು ಎಂಬ ದೇಶೀ ಮೂಲವನ್ನು ತಿಳಿಸುತ್ತಾರೆ. ಹಾಗೆಯೇ ದುಬೈ ಅವರು ಸತಿ ಆಚರಣೆ ಹೊರಗಿನಿಂದ ಬಂದಿರದೆ, ಅದು ಭಾರತದ್ದೆ ಎಂದು ಹೇಳುತ್ತಾರೆ. ಒಂದು ವೇಳೆ ಅದು ಹೊರಗಿನಿಂದ ಬಂದದ್ದಾಗಿದ್ದರೆ ಅದಕ್ಕೆ ಬ್ರಾಹ್ಮಣರು ಒಪ್ಪಿಗೆಯನ್ನು ಕೊಡಬೇಕಾಗಿತ್ತು. ಅಲ್ಲದೆ ಅವರಲ್ಲಿಯೂ ಸತಿಪದ್ಧತಿ ಆಚರಣೆಯಲ್ಲಿರಬೇಕಾಗಿತ್ತು. ಆದರೆ ಬ್ರಾಹ್ಮಣರು ಹತ್ಯಾವಿಧಿಗಳ ಪೌರೋಹಿತ್ಯವಹಿಸಿ ದಕ್ಷಿಣೆ ಪಡೆಯುತ್ತಿದ್ದರೆ ಹೊರತು ಸತಿ ಆಚರಣೆ ಅವರಲ್ಲಿರಲಿಲ್ಲ ಎಂದು ಹೇಳುತ್ತಾರೆ. ವಿದ್ವಾಂಸರ ಈ ಅಭಿಪ್ರಾಯಗಳನ್ನು ಅವಲೋಕಿಸಲಾಗಿ ಭಾರತದಲ್ಲಿ ಸತಿಪದ್ಧತಿಯ ಮೂಲದ ಬಗ್ಗೆ ನಿಖರವಾದ ನಿರ್ಣಯಕ್ಕೆ ಬರಲು ಈವರೆಗೂ ಸಾಧ್ಯವಾಗಿಲ್ಲ.

ಕ್ರಿ.ಶ. 1978ರಲ್ಲಿ ಉತ್ತರಪ್ರದೇಶದ ಪ್ರತಾಪಗರ ಜಿಲ್ಲೆಯ ಮಹಾದಹ ಎಂಬ ಹಳ್ಳಿಯಲ್ಲಿ ಕೈಗೊಂಡ ಭೂ ಉತ್ಖನನದಲ್ಲಿ ಎರಡು ಗೋರಿಗಳಲ್ಲಿ ಗಂಡು-ಹೆಣ್ಣಿನ ಎರಡು ಜೊತೆ ಅಸ್ಥಿಪಂಜರಗಳು ದೊರಕಿವೆ. ಈ ಸಂಶೋಧನೆಯಿಂದ ಸತಿಪದ್ಧತಿಯು ಕ್ರಿ.ಶ.ಪೂ. 10,000 ಅಂದರೆ 'ಮೆಸೊಲಿಥಿಕ್ ಯುಗ'ದಲ್ಲಿ ಇತ್ತೆಂದು ಅಭಿಪ್ರಾಯಪಡಲು ಸಾಧ್ಯವಾಗುತ್ತದೆ. ಸ್ಮಿತ್ ಹೇಳುವ ಸಿಥಿಯನ್ನರ ಮೂಲದ ವಾದವನ್ನು ಮೇಲಿನ ಸಂಶೋಧನೆಯ ಅಂಶಕ್ಕೆ ಹೋಲಿಸಿ ನೋಡಲಾಗಿ ಆ ಮೊದಲೇ ಭಾರತದಲ್ಲಿದ್ದ ಸತಿ ಆಚರಣೆಯು ಸಿಥಿಯನ್ನರ ಪ್ರಭಾವದಿಂದ ಮತ್ತಷ್ಟು ಬಲಿಷ್ಠಗೊಂಡಿತೆಂದು ಹೇಳಲು ಸಾಧ್ಯವಿದೆ. ಲೋಥಾಲ್ ಭೂ ಉತ್ಖನನದ ಸಂದರ್ಭದಲ್ಲಿ ಒಂದೇ ಗೋರಿಯಲ್ಲಿ ಗಂಡು-ಹೆಣ್ಣಿನ ಜೋಡಿ ಅಸ್ಥಿಪಂಜರಗಳು ಪತ್ತೆಯಾಗಿವೆ. ಇವುಗಳ ಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡ ಎಸ್. ಆರ್. ರಾವ್ ಅವರು ಭಾರತದಲ್ಲಿ ಆರ್ಯಪೂರ್ವ ಜನಾಂಗದವರಲ್ಲಿ ಸತಿ ಆಚರಣೆ ಜಾರಿಯಲ್ಲಿತ್ತು ಎಂದು ಹೇಳಿದ್ದಾರೆ. ವೇದಗಳಲ್ಲಿ ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಅಂತ್ಯೇಷ್ಟಿ ಸಂಸ್ಕಾರಕ್ಕೆ ಸಂಬಂಧಿಸಿದ ಎರಡು ಋಕ್ಕುಗಳಲ್ಲಿ ಸತಿ ಬಗ್ಗೆ ಹೀಗೆ ಬರುತ್ತದೆ. 'ಉದೀಶ್ವನಾರಿ' ಎಂಬ ಋಕ್ಕಿನಲ್ಲಿರುವ 'ಉದೀಷ್ವ' 'ಏಹಿ' ಈ ಪದಗಳು ಸಹಗಮನ ಮಾಡಲು ದ್ಯುಕ್ತಳಾದ ಪತ್ನಿಯನ್ನು ಹಾಗೆ ಮಾಡದಂತೆ ಆಗ್ರಹಿಸುವುದನ್ನು ಸೂಚಿಸುತ್ತದೆ. ವಿಧವೆ ಸಹಗಮನ ಹೊಂದಲು ಇಚ್ಛಿಸಿ ಮಡಿದ ಪತಿಯೊಂದಿಗೆ ಚಿತೆಯ ಮೇಲೆ ಮಲಗಿದಂತೆಯೂ ಅವಳಿಗೆ ಮರಣ ಹೊಂದಲು ಆಸ್ಪದ ಕೊಡದೆ

'ಚಿತೆ ಬಿಟ್ಟು ಕೆಳಗಿಳಿದು ಬಂದು ನಿನ್ನ ಮಕ್ಕಳು ಹಾಗೂ ಸಂಪತ್ತಿನೊಂದಿಗೆ ಸುಖವಾಗಿ ಬಾಳು' ಎಂದು ಉಳಿದವರು ಪ್ರಾರ್ಥನೆ ಮಾಡಿದಂತೆಯೂ ಅಥರ್ವಣವೇದದಲ್ಲಿ ಉಲ್ಲೇಖವಿದೆ. ಹಾಗಾಗಿ ವೇದಗಳು ಈ ಪದ್ಧತಿಯನ್ನು ಅಷ್ಟೇನು ಪುರಸ್ಕರಿಸಿದಂತೆ ತೋರುವುದಿಲ್ಲ.

ಬೌದ್ಧ ಸಾಹಿತ್ಯಗಳು ಸಹಗಮನ ವಿಷಯದಲ್ಲಿ ಮೌನ ತಾಳಿವೆ. ಜೈನ ಧರ್ಮದಲ್ಲಿ ಸತಿ ಆಚರಣೆಗೆ ಅವಕಾಶವಿರಲಿಲ್ಲವಾದರೂ ಹಿಂದೂ ಧರ್ಮದ ಪ್ರಭಾವದಿಂದ ಅದನ್ನು ಆಚರಿಸಿದ ಬಗ್ಗೆ ಅಲ್ಲಲ್ಲಿ ಮಾಹಿತಿಗಳು ದೊರೆಯುತ್ತವೆ. ಕೌಟಿಲ್ಯ ಇದನ್ನು ಉಲ್ಲೇಖಿಸಿಲ್ಲ ಹಾಗೂ ಸ್ಮೃತಿಕಾರರಾದ ಮನು ಮತ್ತು ಯಾಜ್ಞವಲ್ಕ್ಯರೂ ಇದನ್ನು ಹೆಸರಿಸಿಲ್ಲ. ಮಾದ್ರಿಯ (ಪಾಂಡುರಾಜನ ಮಡದಿ) ಸಹಗಮನವನ್ನು ಬಿಟ್ಟರೆ ಮಹಾಭಾರತದಲ್ಲಿಯೂ ಈ ಪದ್ಧತಿಗೆ ಬೆಂಬಲವಿದ್ದಂತೆ ತೋರುವುದಿಲ್ಲ. ಪುರಾಣಗಳ ಕಾಲಕ್ಕೆ ಬಂದರೆ ಕೆಲವು ಸತಿ ಪ್ರಸಂಗಗಳು ದೊರೆಯುತ್ತವೆ. ಮಡಿದ ಗಂಡನ ಜೊತೆಯಲ್ಲಿ ಅಗ್ನಿಪ್ರವೇಶ ಮಾಡಿದ ವಿಧವೆ ಪತಿಸಹಿತ ಸ್ವರ್ಗಕ್ಕೆ ಹೋಗುತ್ತಾಳೆ ಎಂದು ಅಗ್ನಿಪುರಾಣದಲ್ಲಿದೆ. ಪದ್ಮಪುರಾಣದಲ್ಲಿ ಬ್ರಾಹ್ಮಣ ವಿಧವೆಯ ಸಹಗಮನಕ್ಕೆ ಸಹಾಯ ಮಾಡಿದವನು ಬ್ರಾಹ್ಮಣಹತ್ಯೆ ಪಾಪಕ್ಕೆ ಗುರಿಯಾಗುತ್ತಾನೆ ಎಂದು ಹೇಳಿದೆ. ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಸಹಗಮನ ಪದ್ಧತಿ ಹೆಚ್ಚು ಪ್ರಚಾರಕ್ಕೆ ಬಂದಿತು. ವಾತ್ಸ್ಯಾಯನನ ಕಾಮಸೂತ್ರ, ಕಾಳಿದಾಸನ ಕುಮಾರಸಂಭವ, ಭಾಸನ ಊರುಭಂಗ ಮತ್ತು ದೂತಘಟೋತ್ಕಜಗಳಲ್ಲಿ ಸಹಗಮನದ ಪ್ರಸಂಗಗಳು ಕಂಡುಬರುತ್ತವೆ. ಬೃಹಸ್ಪತಿ ಈ ಆಚರಣೆಯನ್ನು ಬೆಂಬಲಿಸಿದ್ದಾನೆ. ಗಾರುಡಿಗನು ಹುತ್ತದಲ್ಲಿ ಸೇರುತ್ತಿದ್ದ ಹಾವನ್ನು ಹೊರತೆಗೆಯುವಂತೆ ಸತಿ ಹೋಗುವ ಸ್ತ್ರೀ ನರಕದಲ್ಲಿ ಬಿದ್ದ ಪತಿಯನ್ನು ಹೊರತೆಗೆದು ಸ್ವರ್ಗಕ್ಕೆ ಕರೆದೊಯ್ದು ಅಲ್ಲಿ ಅವನೊಂದಿಗೆ ಮೂರುವರೆ ಕೋಟಿ ವರ್ಷ ಸುಖವಾಗಿರುವಳೆಂದು ಪರಾಶರಸ್ಮೃತಿ ತಿಳಿಸುತ್ತದೆ. ಹಾರಿತ ಇದನ್ನೇ ಅನುಮೋದಿಸುತ್ತಾನೆ. ಇದನ್ನು ಗಮನಿಸಿದರೆ ಕ್ರಿಸ್ತಶಕದ ಆರಂಭಕ್ಕೆ ಭಾರತದಲ್ಲಿ ಶಾಸ್ತ್ರಪುರಾಣಗಳು, ಸ್ಮೃತಿಕಾರರು ಸತಿಪದ್ಧತಿಗೆ ಸಮ್ಮತಿಯನ್ನು ಸೂಚಿಸಿದಂತೆ ತೋರುತ್ತದೆ. ಅಲ್ಲದೆ ಅಲ್ಲಲ್ಲಿ ವಿರೋಧಿಸಿದ್ದನ್ನೂ ಕಾಣಬಹುದು.

ಕಲ್ಹಣನ ತನ್ನ ರಾಜತರಂಗಿಣಿಯಲ್ಲಿ ಕಲಶ, ಉತ್ಕರ್ಷ ರಾಜರು ಮೃತರಾದಾಗ ಅವನ ಪತ್ನಿಯರು, ಉಪಪತ್ನಿಯರಲ್ಲದೆ ತಾಯಿ, ಸಹೋದರಿ, ಮಂತ್ರಿ, ಸೇವಕ ಮೊದಲಾದವರು ಚಿತೆಯೇರಿದ್ದನ್ನು ಚಿತ್ರಿಸಿದ್ದಾನೆ. ಉಚ್ಚಲ ರಾಜ ಮಡಿಯಲು ಅವನ ರಾಣಿಯರಾದ ದಿಡ್ಡೆ ಮತ್ತು ಜಯಮತಿಯರು ಸಹಗಮನಗೊಳ್ಳುವ ಸಂದರ್ಭದಲ್ಲಿ ತಮ್ಮನ್ನ ರಹಸ್ಯವಾಗಿ ರಕ್ಷಿಸುವಂತೆ ಮಂತ್ರಿಗಳಿಗೆ ಲಂಚ ಕೊಟ್ಟ ವಿಚಾರವನ್ನು ಕಲ್ಹಣ ತಿಳಿಸುತ್ತಾನೆ. ಕ್ರಿ.ಶ.ಸು. 1100ರಲ್ಲಿ ರಚಿತವಾದ ಕಥಾಸರಿತ್ಸಾಗರವು ದೇವಶರ್ಮನ

ಪತ್ನಿ, ಅಗ್ನಿದತ್ತನೆಂಬ ಬ್ರಾಹ್ಮಣನ ಪತ್ನಿ ಹಾಗೂ ಮಾತೃದತ್ತೆ, ಚಂದ್ರಶ್ರೀಯರ ಸಹಗಮನ ಕಥನಗಳನ್ನು ಒಳಗೊಂಡಿದೆ. ಕ್ರಿ.ಶ. 10ನೆಯ ಶತಮಾನದ ನಂತರ ಉತ್ತರಭಾರತದಲ್ಲಿ ಸತಿಪದ್ಧತಿ ಹೆಚ್ಚು ಪ್ರಚಾರಕ್ಕೆ ಬಂದಿತು. ಮೊದಮೊದಲು ಉನ್ನತ ಮನೆತನಗಳಲ್ಲಿ, ಅದರಲ್ಲಿಯೂ ಕ್ಷತ್ರಿಯರಲ್ಲಿ ಹೆಚ್ಚು ಆಚರಣೆಯಲ್ಲಿದ್ದ ಸತಿ ಪದ್ಧತಿಯನ್ನು ತದನಂತರದಲ್ಲಿ ಬ್ರಾಹ್ಮಣರೂ ಅಳವಡಿಸಿಕೊಂಡಂತೆ ತೋರುತ್ತದೆ. ಕಾಲಕ್ರಮೇಣ ಇವರೊಂದಿಗೆ ಸಾಮಾನ್ಯ ವರ್ಗಗಳಾದ ವೈಶ್ಯ, ಶೂದ್ರ ಮಹಿಳೆಯರೂ ಪಾಲ್ಗೊಳ್ಳತೊಡಗಿದರು. ಹೀಗೆ ವ್ಯಾಪಿಸುತ್ತಬಂದ ಸತಿಪದ್ಧತಿ ಕ್ರಮೇಣ ದಕ್ಷಿಣದತ್ತ ಪ್ರಸಾರವಾಗತೊಡಗಿತು. ತಮಿಳಿನ ಶಿಲಪ್ಪದಿಕಾರಂನಲ್ಲಿಯ ಕನ್ನಗಿಯ ಸಹಗಮನ, ತೆಲುಗುರಾಜ್ಯದ ಪೆರಂತಲಮ್ಮಳ ಸಹಗಮನಗಳನ್ನು ಇಲ್ಲಿ ಹೆಸರಿಸಬಹುದು. ಎ. ಎಸ್. ಅಲ್ತೇಕರರು ಪಲ್ಲವ, ಚೋಳ, ಪಾಂಡ್ಯ ರಾಜರ ಕಾಲದಲ್ಲಿ ಸುಮಾರು ಕ್ರಿ.ಶ. 900ರವರೆಗೆ ಸತಿ ಉಲ್ಲೇಖ ಶಾಸನಗಳಲ್ಲಿ ಕಂಡುಬರುವುದಿಲ್ಲ. ಅಲ್ಲದೆ 13ನೇ ಶತಮಾನದವರೆಗೆ ರಜಪೂತರಲ್ಲಿಯೂ ಬಹುಸಂಖ್ಯೆಯಲ್ಲಿ ಸತಿಘಟನೆಗಳು ಆಗಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಕ್ರಿ.ಶ. 1206ರ ನಂತರ ಭಾರತದಲ್ಲಿ ಮುಸ್ಲಿಂ ಆಳ್ವಿಕೆ ಪ್ರಾರಂಭವಾಗುತ್ತದೆ. ದೆಹಲಿ ಸುಲ್ತಾನರು, ಮೊಘಲರು ಭಾರತದ ಬಹುಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸುತ್ತಾರೆ. ಈ ಕಾಲದಲ್ಲಿ ಹಿಂದೂಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ರಜಪೂತರಲ್ಲಿ ಸತಿ ಘಟನೆಗಳು ಬಿರುಸಾಗಿ ನಡೆದವು. ಮುಸ್ಲಿಂ ಅರಸರು ಇದನ್ನು ನಿಯಂತ್ರಿಸಲು ಪ್ರಯತ್ನಿಸಿದರಾದರೂ ಸತಿ ಆಚರಣೆ ಅವ್ಯಾಹತವಾಗಿ ಮುಂದುವರಿಯಿತು. ಜೋಧ್‌ಪುರ್ ಅರಸ ಅಜಿತ್‌ಸಿಂಗ್ 1724ರಲ್ಲಿ ಸತ್ತಾಗ ಅವನೊಂದಿಗೆ ಆತನ 64 ಜನ ರಾಣಿಯರು ಚಿತೆಯೇರಿದರೆಂದು ತಿಳಿದುಬರುತ್ತದೆ. ಬುಂದಿಯ ದೊರೆ ಬುಧಸಿಂಗ್‌ನೊಂದಿಗೆ ಅವನ 84 ಜನ ರಾಣಿಯರು ಸಹಗಮನ ಮಾಡಿದ ದಾಖಲೆ ಇದೆ. ಸಿಖ್ಖರ ಗುರು ಅಮರದಾಸ ಇದಕ್ಕೆ ನಿರ್ಬಂಧ ವಿಧಿಸಿದ್ದರೂ ರಣಜಿತ್‌ಸಿಂಗ್ ನೊಂದಿಗೆ ಹನ್ನೊಂದು ಜನ ರಾಣಿಯರು, ಖರಗ್‌ಸಿಂಗ್ ಜೊತೆ ಮೂರು ಜನ ರಾಣಿಯರು, ಬಸಂತ್‌ಸಿಂಗ್ ನೊಂದಿಗೆ ಐದು ಜನ, ಕಿಶೋರಿಸಿಂಗ್ ಜೊತೆ ಹನ್ನೊಂದು ಜನ, ಹೀರಾಸಿಂಗ್ ನೊಂದಿಗೆ ಇಪ್ಪತ್ತನಾಲ್ಕು ರಾಣಿಯರು ಮತ್ತು ಸುಚೇತ್‌ಸಿಂಗ್ ಸತ್ತಾಗ 310 ಜನ ರಾಣಿಯರು ಸಹಗಮನ ಆಚರಿಸಿದ ದಾಖಲೆಗಳಿವೆ. ಉತ್ತರ ಭಾರತದಲ್ಲಿ ಮತ್ತು ದಕ್ಷಿಣದ ಕೆಲವು ರಾಜ್ಯಗಳಲ್ಲಿ 13ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸತಿ ಘಟನೆಗಳು ನಡೆದ ಬಗ್ಗೆ ಮಾಹಿತಿ ದೊರೆಯುತ್ತದೆ.

ಹದಿನಾರನೆಯ ಶತಮಾನದಲ್ಲಿ ಯುರೋಪಿಯನ್ನರು ಭಾರತದಕ್ಕೆ ಬರಲಾರಂಭಿಸಿ, ಇಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ ನಂತರ ಸತಿ ಆಚರಣೆ ತೀವ್ರವಾದ ಸ್ಥಿತಿಯನ್ನು ಮುಟ್ಟಿತು. ಬ್ರಾಹ್ಮಣ ಸ್ತ್ರೀಯರನ್ನೊಳಗೊಂಡಂತೆ ಪ್ರತಿಯೊಂದು ಸಂಪ್ರದಾಯಸ್ಥ ಕುಟುಂಬದಲ್ಲಿ ಇದು ಕಡ್ಡಾಯ ಆಚರಣೆಯಾಗಿ ರೂಪುಗೊಳ್ಳಲು

ಪ್ರಾರಂಭಿಸಿತು. ಕ್ರಿ.ಶ. 1510ರಲ್ಲಿ ಪೋರ್ಚುಗೀಸ್ ಗವರ್ನರ್ ಅಲ್ಬುಕರ್ಕ್ ಗೋವಾ ಗಡಿಗಳಲ್ಲಿ ಸತಿ ಆಚರಣೆಯನ್ನು ನಿಷೇಧಿಸಿದ. ಚಿನ್ಸುರಾದಲ್ಲಿ ಡಚ್ಚರು ಇದನ್ನು ನಿಷೇಧಿಸಿದಂತೆ ಥಾಮ್ಸನ್ ಹೇಳುತ್ತಾನೆ. ಫ್ರೆಂಚರೂ ಕೂಡಾ ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಹಿಂದೂ ಧರ್ಮದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲಿಚ್ಛಿಸದ ಬ್ರಿಟಿಷರು ಇದನ್ನು ಕಟ್ಟುನಿಟ್ಟಾಗಿ ತಡೆಯಲು ಪ್ರಯತ್ನಿಸದ ಕಾರಣ ಸತಿ ಘಟನೆಗಳು ಮತ್ತಷ್ಟು ಹೆಚ್ಚಾದವೆಂದು ಥಾಮ್ಸನ್ ಹೇಳುತ್ತಾನೆ. ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಮತ್ತು ಭಾರತದಲ್ಲಿ ಪ್ರಾರಂಭವಾದ ಸಮಾಜೋ-ಧಾರ್ಮಿಕ ಸುಧಾರಣಾ ಚಳುವಳಿಯ ಪರಿಣಾಮದಿಂದ ಮೊದಲ ಬಾರಿಗೆ 1817ರಲ್ಲಿ ಬ್ರಿಟೀಷ್ ಸರ್ಕಾರ ಬ್ರಾಹ್ಮಣ ಸ್ತ್ರೀಯರಿಗೆ ಸಹಗಮನವನ್ನು ನಿಷೇಧಿಸುತ್ತದೆ. 1818ರಲ್ಲಿ ರಾಜಾರಾಮ್ ಮೋಹನ್‌ರಾಯ್ ಕರಪತ್ರಗಳನ್ನು ಹಂಚುವ ಮೂಲಕ ಇದರ ವಿರುದ್ಧ ಜಾಗೃತೆ ಮೂಡಿಸುತ್ತಾರೆ. 1829 ಡಿಸೆಂಬರ್ 5 ರಂದು ವಿಲಿಯಂ ಬೆಂಟಿಂಕ್ ಬ್ರಿಟಿಷ್ ಅಧಿಪತ್ಯದ ಎಲ್ಲಾ ಪ್ರದೇಶಗಳಲ್ಲಿ ಸತಿಪದ್ಧತಿಯನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತಂದು ಅದನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾನೆ. ಬ್ರಿಟಿಷರು ಅನೇಕ ದೇಶೀಯ ಸಂಸ್ಥಾನಗಳಲ್ಲಿಯೂ ಒತ್ತಾಯಪೂರ್ವಕವಾಗಿ ಸತಿ ಆಚರಣೆಯನ್ನು ಹತ್ತಿಕ್ಕಲು ಪ್ರಯತ್ನಿಸಿದ ಬಗ್ಗೆ ಥಾಂಮ್ಸನ್ ವಿವರಿಸುತ್ತಾನೆ. ಹೀಗಿದ್ದರೂ ಕೂಡಾ ಬ್ರಿಟೀಷ ಸರ್ಕಾರದ ಪರವಾನಗಿಯನ್ನು ಪಡೆದು ಹಾಗೂ ಕೆಲವೊಂದು ಬಾರಿ ಸರ್ಕಾರಕ್ಕೆ ಗೊತ್ತಾಗದಂತೆ ಸತಿ ಘಟನೆಗಳು ನಡೆದಿರುವುದನ್ನು ಗಮನಿಸಿದರೆ ಭಾರತೀಯ ಸಮಾಜದಲ್ಲಿ ಸತಿ ಪದ್ಧತಿ ಆಳವಾಗಿ ಬೇರುಬಿಟ್ಟಿರುವ ಅಂಶವನ್ನು ಮನಗಾಣಬಹುದು.

ಸತಿ ಪದ್ಧತಿಯ ಬಗ್ಗೆ ಅತಿಶಯೋಕ್ತಿಗಳಿದ್ದರೂ ನಂಬಲರ್ಹ ಮತ್ತೊಂದು ಸಾಹಿತ್ಯಿಕ ಆಧಾರವೆಂದರೆ ವಿದೇಶಿ ಬರಹಗಾರರ ವರದಿಗಳು ಮತ್ತು ದಿನಚರಿಗಳು. ಪ್ರಮುಖವಾಗಿ 13ನೇಯ ಶತಮಾನದಿಂದ 16ನೆಯ ಶತಮಾನದವರೆಗೆ ಭಾರತಕ್ಕೆ ಭೇಟಿನೀಡಿದ ಮಾರ್ಕೊಪೊಲೊ, ಫ್ರೈಯರ್ ಒಡೊರಿಕ್, ಸರ್ ಜಾನ್‌ಮಾಂಡವಿಲೆ, ಇಬ್ ನೆ ಬತೂತಾ, ನಿಕೊಲೊ ದೆ ಕೊಂತಿ, ದು ಆರ್ತೆ ಬಾರ್ಬೊಸಾ, ಫೆರ್ನಾಂವ್ ನೂನಿಜ್, ಸೀಜರ್ ಫ್ರೆಡರಿಕ್, ಜಾನನ್ ಹ್ಯೂಘೆನ್ ಫನಲಿನ್ ಘಾಟಿನ್, ಫ್ರೆಆರ್ ಜೋರ್ಡಾಸನ್, ಫಾದರ್ ಅಂತೊನಿ ಮಾನ್ಸೆರೆಟ್, ಗಾಸಾರೋ ಬಾಲ್ಬಿ, ರಾಲ್ಫ್ ಪಿಚ್ ಮುಂತಾದವರ ಅಮೂಲ್ಯ ಮಾಹಿತಿಗಳು ಸತಿ ಪದ್ಧತಿಯ ಬಗ್ಗೆ ತಿಳಿಸುತ್ತವೆ. ಅಲ್ಲದೆ 17 ಮತ್ತು 18ನೆಯ ಶತಮಾನದಲ್ಲಿ ಈ ಪದ್ಧತಿಯ ಬಗ್ಗೆ ಬರೆದ ವಿಲಿಯಂ ಹಾಕಿನ್ಸ್, ಸರ್ ಥಾಮಸ್‌ರೋ, ಎಡ್ವರ್ಡ್ ಟೆರ್ರಿ, ಫ್ರಾನ್ಸುವಾ ಪಿರಾರ್ಡ್ ಲವಲ್, ಪೀಟರ್ ಫ್ಲೋರೀಸ್, ಅಂತೊ ನಿಷೋರರ್, ವಿಲಿಯಂ ಮೆಥೋಲ್ಡ್, ಫ್ರಾನ್ಸಿಸ್ಕೋ ಪೆಲ್ಸಾರ್ಟ್, ಮನುಮೆ ಬರ್‌ರಾಡಾಸ್, ಪೀಟರ್ ಮಂಡಿ, ಪಿಯೆತ್ರೊ ಡೆಲ್ಲಾವಲ್ಲೆ, ಮಂಡೆಲ್ ಸೊಲ, ಥಾಮಸ್ ಹೆರ್ಬರ್ಟ್, ನಿಕೊಲೊಮನುಚಿ ಮುಂತಾದವರ ಬರವಣಿಗೆಗಳನ್ನು

ಇಲ್ಲಿ ಸ್ಮರಿಸಬಹುದು.

ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ ಕ್ರಿ.ಶ. 450ರ ಕಾಲಾವಧಿಯ ಸೊರಬ ತಾಲೂಕಿನ ಕವಡಿ ಶಾಸನೋಕ್ತ ಕದಂಬ ರವಿವರ್ಮನ ರಾಣಿ ತನ್ನ ಪತಿಯೊಂದಿಗೆ ಮುಕ್ತಳಾದಳೆಂದು ಹೇಳುವ ಘಟನೆಯು ಮೊದಲನೆಯದಾಗಿ ದೊರೆಯುವ ಸಹಗಮನ ಪ್ರಥಮ ಉಲ್ಲೇಖವಾಗಿದೆ. ಮುಂದೆ ಸುಮಾರು ನಾಲ್ಕು ಶತಮಾನಗಳ ಕಾಲ ಕರ್ನಾಟಕದಲ್ಲಿ ಎಲ್ಲಿಯೂ ಸಹಗಮನದ ಘಟನೆಗಳು ನಡೆದ ಬಗ್ಗೆ ದಾಖಲೆಗಳು ದೊರೆಯುವುದಿಲ್ಲ. ಕರ್ನಾಟಕದ ಎಲ್ಲಾ ಮಾಸ್ತಿಕಲ್ಲುಗಳ ಶಾಸನಪಾಠಗಳು ಪ್ರಕಟವಾದಲ್ಲಿ ಮಾತ್ರ ಈ ಕಾಲಾವಧಿಯ ಸತಿ ಆಚರಣೆಯ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗಬಹುದು. ಇಲ್ಲಿಂದ ಒಮ್ಮೆಲೇ ಕಂಡುಬರುವ ಸತಿ ಉಲ್ಲೇಖವೆಂದರೆ ಕ್ರಿ.ಶ. 908ರ ಹೆಗ್ಗಡೆ ತೊಮ್ಮನ ಹೆಂಡತಿ ಬಳಕ್ಕಳ ಸಹಗಮನ ಘಟನೆ. ಕರ್ನಾಟಕದಲ್ಲಿ ಸಹಗಮನದ ಸ್ಪಷ್ಟ ಐತಿಹಾಸಿಕ ನಿದರ್ಶನ ಕ್ರಿ.ಶ. 972ರ ಸೊರಬ ತಾಲೂಕು ಬೆನ್ನೂರು ಶಾಸನದಲ್ಲಿ ದೊರೆಯುತ್ತದೆ. ಬದಿಯಣ್ಣ ಮರಣಿಸಿದಾಗ ಅವನ ಮಡದಿ ಜಕ್ಕಬೆ ಸಹಗಮನ ಆಚರಿಸಲು, ಅವಳ ತಂಗಿ ಜಾಬೆಯು ಮಾಸ್ತಿಕಲ್ಲನ್ನು ನಿಲ್ಲಿಸಿದಳೆಂದು ಈ ಶಾಸನ ತಿಳಿಸುತ್ತದೆ. ಕ್ರಿ.ಶ. 1051ರ ಶಾಸನವೊಂದರಲ್ಲಿ ಬೋಗಾರ ಕರಡಿಯ ಸೆಟ್ಟಿ ಮಡಿದಾಗ ಅವನ 'ಮದುವಳಿಗೆ' ನಾಗಮ್ಮ ಸಹಗಮನ ಮಾಡಿದ ವಿಷಯವಿದ್ದು, ಅವಳಿಗಾಗಿ ನಿಲ್ಲಿಸಿದ 'ಮಾಸಿಕಳು' (ಮಾಸ್ತಿಕಲ್ಲು )ವಿನ ವಿಷಯವಿದೆ. ಹೆಗ್ಗಡೆ ದೇವನಕೋಟೆಯ ಬೆಳತೂರು ಶಾಸನವು 'ಅನುಗಮನ' ಮರಣವನ್ನು ಉಲ್ಲೇಖಿಸುತ್ತದೆ. ದೇಕಬ್ಬೆಯ ಮಾಸ್ತಿಮರಣವನ್ನು ವರ್ಣಿಸುವ ಈ ಶಾಸನದಷ್ಟು ವಿಸ್ತಾರವಾದ ಶಾಸನ ಕನ್ನಡದಲ್ಲಿ ಮತ್ತೊಂದಿಲ್ಲ. ಕ್ರಿ.ಶ.ಸು 1088ರ ಶಾಸನವೊಂದು ನವಲಾಷಿರಾಜ ಸತ್ತಾಗ ಅವನ ಎಳೆಯ ಹೆಂಡತಿಯೊಬ್ಬಳು ಬೆಂಕಿಯಲ್ಲಿ ಹಾರಿ ಪ್ರಾಣಬಿಟ್ಟ ವಿಷಯವಿದೆ. ಆರನೇ ಶತಮಾನದಿಂದ 12ನೆಯ ಶತಮಾನದ ಮಧ್ಯಭಾಗದವರೆಗೆ ಸಹಗಮನದ ಕೆಲವೇ ಕೆಲವು (ಕೇವಲ ಹತ್ತು ) ನಿದರ್ಶನಗಳು ದೊರಕುತ್ತವೆ. ಮುಂದೆ ಇವುಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ಕರ್ನಾಟಕದಲ್ಲಿ ವೀರಯುಗದೊಡನೆ ಪ್ರಬಲಗೊಂಡ ಸತಿ ಪದ್ಧತಿಯು ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿತು. ಇದಕ್ಕೆ ಕಾರಣ ಈ ಕಾಲಾವಧಿಯಲ್ಲಿ ಘಟಿಸಿದ ಹೆಚ್ಚು ಯುದ್ಧಗಳು ಮತ್ತು ಕರ್ನಾಟಕದ ಮೇಲೆ ಖಿಲ್ಜಿ, ತುಘಲಕ್ ಮತ್ತು ಶಾಹಿ ಸುಲ್ತಾನರು ಕೈಗೊಂಡ ದಾಳಿಗಳು ಕಾರಣವೆಂದು ಹೇಳಬಹುದು.

ಬ್ರಿಟೀಷರ ಕಾಲಾವಧಿಯ ಕರ್ನಾಟಕದ ಸತಿ ಪದ್ಧತಿಯ ಬಗ್ಗೆ ಬಾರ್ಬೊಸಾ (1500) ನೂನಿಝ್ ಮತ್ತು ಸೀಜರ್ ಫ್ರೆಡರಿಕ್ (1563) ಹಾಗೂ ಪಿಯೆತ್ರಡೆಲ್ಲೆವಲ್ಲೆ (1623) ಮುಂತಾದವರ ದಿನಚರಿಗಳು ಮತ್ತು ಮಿಷನರಿಯ ವರದಿಗಳು ತಿಳಿಸುತ್ತವೆ.

ಜನಪದ ಸಾಹಿತ್ಯದಲ್ಲಿಯೂ ಸತಿ ಪ್ರಸಂಗಗಳು ಕಂಡುಬಂದಿವೆ. ಈರೋಬಿ ವಡ್ಡಗೆರೆ ನಾಗಮ್ಮ ಮತ್ತು ನಾಗವ್ವ ಮೊದಲಾದ ಕಥೆಗಳಲ್ಲಿ. ಶ್ರೀನಿವಾಸರ ಮಾಸ್ತಿ ಎಂಬ ನಾಟಕದಲ್ಲಿ ಸಹಗಮನದ ಸನ್ನಿವೇಶಗಳಿವೆ. ಪ್ರಾದೇಶಿಕ ದೃಷ್ಟಿಯಿಂದ ಗಮನಿಸಿದರೆ ಕರ್ನಾಟಕದ ದಕ್ಷಿಣ ಭಾಗ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚು ಮಹಾಸತಿ ಘಟನೆಗಳು ಸಂಭವಿಸಿರುವುದು ಕಂಡುಬರುತ್ತದೆ. ಉತ್ತರ ಕರ್ನಾಟಕದ ಭಾಗದಲ್ಲಿ ಇದು ವಿರಳವೆಂದೇ ಹೇಳಬೇಕಾಗುತ್ತದೆ. ಇದಕ್ಕೆ ಕಾರಣ 12ನೇ ಶತಮಾನದಲ್ಲಿ ಈ ಭಾಗದಲ್ಲಿ ಆರಂಭವಾದ ಶರಣರ ಸಾಮಾಜಿಕ ಚಳುವಳಿಯ ಪ್ರಭಾವ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

**ಉಪಸಂಹಾರ:**

ಒಟ್ಟಿನಲ್ಲಿ ತನ್ನ ಪತಿಯ ಮರಣದ ನಂತರ ಸತಿಯು ಅವನೊಡನೆ 'ಪ್ರಾಣತ್ಯಾಗ' ಮಾಡುತ್ತಿದ್ದ ಪದ್ಧತಿಯನ್ನು 'ಸತಿ' (ಮಹಾಸತಿ) ಆಚರಣೆ ಎಂದು ಕರೆಯುತ್ತಿದ್ದರು. ಹೀಗೆ ಪ್ರಾಣಾರ್ಪಣೆ ಮಾಡಿಕೊಳ್ಳುತ್ತಿದ್ದ ಸ್ತ್ರೀ ತನ್ನ ಸ್ವ-ಇಚ್ಛೆಯಿಂದ, ಪಾತಿವ್ರತ್ಯವನ್ನು (ಶೀಲವನ್ನು) ಕಾಪಾಡಿಕೊಳ್ಳಲು, ಸಾಮಾಜಿಕ ಮೌಲ್ಯಕ್ಕೊಸ್ಕರ, ಸ್ವರ್ಗದಲ್ಲಿ ಪತಿಯನ್ನು ಸೇರುವ ಭಾವನೆಯಿಂದ, ಕೆಲವೊಮ್ಮೆ ಬಲಾತ್ಕಾರದಿಂದಲೂ ಪ್ರಾಣೋತ್ಕ್ರಮಣ ಮಾಡಿಕೊಳ್ಳುತ್ತಿದ್ದಳು. ಇಂಥವರನ್ನು 'ಮಹಾಸತಿ'ಯರೆಂದು ಕರೆದು ಅವರ ಸ್ಮರಣೆಗಾಗಿ ಮಾಸ್ತಿಕಲ್ಲುಗಳನ್ನು ನೆಡುತ್ತಿದ್ದರು. ಮಹಾಸತಿಯ ಸಂಕ್ಷಿಪ್ತರೂಪವೇ ಮಾಸ್ತಿಯಾಗಿದೆ. ಇಲ್ಲಿ 'ಸತಿ' ಎಂಬ ಪದದ ಅಕ್ಷರಶಹ ಅರ್ಥವು ಸ್ಪಷ್ಟವಾಗಿ 'ಸ್ತ್ರೀ' ಎಂಬುದನ್ನು ಸೂಚಿಸಿದರೂ, ಸ್ತ್ರೀಯೊಬ್ಬಳು ತನ್ನ ಪತಿಯ ನಿಧನಾನಂತರ ಅವನೊಂದಿಗೆ ಮರಣ ಹೊಂದುವ ಸಾಮಾಜಿಕ ವಿಧಿಯ ಸಂಕೇತವಾಗಿದೆ. ಈ ಪದ್ಧತಿಯು ಭಾರತದಲ್ಲಿ ಆಚರಿಸಲ್ಪಡುತ್ತಿದ್ದ ಸಮಕಾಲೀನ ಕಾಲಾವಧಿಯಲ್ಲಿಯೇ ಇತರೆ ದೇಶಗಳಲ್ಲೂ ಆಚರಣೆಯಲ್ಲಿತ್ತೆಂದು ಹೇಳಬಹುದು.

## ಆಧಾರ ಗ್ರಂಥಗಳು:


1. ಕಲಬುರ್ಗಿ ಎಂ.ಎಂ., (2011), ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಚಿದಾನಂದಮೂರ್ತಿ ಎಂ., (2006), ಬೃಹತ್ ಕರ್ನಾಟಕ: ಭಾಷಿಕ ಸಾಂಸ್ಕೃತಿಕ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
3. ಚನ್ನಕ್ಕ ಎಲಿಗಾರ, (1990), ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ಶಂಕರರಾವ್ ಚ.ನ., (2002), ಭಾರತೀಯ ಸಮಾಜ, ಮಂಗಳೂರು: ಜೈಭಾರತ್ ಪ್ರಕಾಶನ.
5. ಕಲಬುರ್ಗಿ ಎಂ.ಎಂ., (2011), ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಭಟ್ಸೂರಿ ಕೆ.ಜಿ. (ಸಂ.), ಶಾಸನ ಅಧ್ಯಯನ ಸಂಪುಟ–8/2, ಮೈಸೂರು: ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ.
7. ಮಂಜುನಾಥ ಸಿ.ಯು., (2012), ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
8. ರೋಹಿಣಿ ಬಿ.ಎಂ. ಮತ್ತು ಶಶಿಲೇಖಾ ಬಿ., (2010), ತುಳುನಾಡಿನ ಮಾಸ್ತಿ ಕಲ್ಲುಗಳು–ವೀರಗಲ್ಲುಗಳು, ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ.
9. ಶೇಠ ಬಿ.ಎಸ್., (1991), ಕರ್ನಾಟಕದಲ್ಲಿ ಸತಿ ಪದ್ಧತಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
10. ಬಸವರಾಜ ಕಲ್ಗುಡಿ, (1985), ಮಹಾಸತಿ ಆಚರಣೆ ಒಂದು ಅಧ್ಯಯನ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
11. Altekar A.S., (1962), The Position of Women in Hindu Civilization, Delhi: Motilal Banarsidass.
12. ಚನ್ನಕ್ಕ ಎಲಿಗಾರ, (1990), ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
13. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಎಪಿಗ್ರಾಫಿಯಾ ಕರ್ನಾಟಕ – ಸಂಪುಟ 8 (ಶಾ.ಸಂ.–523, ಕವಡಿ, ಸೊರಬ ತಾಲ್ಲೂಕು), ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ.
14. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ (S.I.I) – ಸಂಪುಟ 9, ಭಾಗ–1 ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ.
15. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಎಪಿಗ್ರಾಫಿಯಾ ಕರ್ನಾಟಕ – ಸಂಪುಟ 8, ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ.
16. ಚಿದಾನಂದಮೂರ್ತಿ ಎಂ., (2011), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು:

ಸಪ್ನ ಬುಕ್ ಹೌಸ್.

17. ನಾಗೇಗೌಡ ಹೆಚ್.ಎಲ್., (2006), ಪ್ರವಾಸಿ ಕಂಡ ಇಂಡಿಯಾ ಸಂಪುಟ-2, ಬೆಂಗಳೂರು: ನವಕರ್ನಾಟಕ ಪ್ರಕಾಶನ.
18. ಪರಮಶಿವಯ್ಯ ಜಿ.ಶಂ. (ಸಂ.), (1979), ಜನಪದ ಖಂಡಕಾವ್ಯಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
19. ಶ್ರೀನಿವಾಸ, (1953), ಮಾಸ್ತಿ, ಬೆಂಗಳೂರು: ಜೀವನ ಕಾರ್ಯಾಲಯ.
20. ಕಲಬುರ್ಗಿ ಎಂ.ಎಂ., (2006), ಸಂಸ್ಕೃತಿ-ವಿಕೃತಿ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
21. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, (ವರ್ಷ ಲಭ್ಯವಿಲ್ಲ), ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ (S.I.I) - ಸಂಪುಟ 18, ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ.
22. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಎಪಿಗ್ರಾಫಿಯಾ ಕರ್ನಾಟಕ - ಸಂಪುಟ 7, ಭಾಗ-1, ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.